NP – 003

2

# I Semester B.Com. Examination, March/April 2023
## (NEP) (2021 – 2022 and Onwards) (F+R)
### ಕನ್ನಡ ಭಾಷಾ ಪಠ್ಯ ಪತ್ರಿಕೆ - I
### ವಾಣಿಜ್ಯ ಕನ್ನಡ - ೧

St. Claret College LIBRARY Bangalore-560013

Time : 2½ Hours Max. Marks : 60

I. **ನಾಲ್ಕು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (ಎಂಬತ್ತು ಪದಗಳಿಗೆ ಮೀರದಂತೆ). **(5×4=20)**

1) ಕನ್ನಡವನ್ನು ಹೇಗೆ ಬಳಸಬೇಕು ಎಂದು ಲೇಖಕರು ಹೇಳಿದ್ದಾರೆ ?

2) ತಿರುವಳ್ಳುವರ್ ಹಾಗೂ ಶಿವಾಜಿ ಪ್ರತಿಮೆಗಳ ಪ್ರಕರಣದಿಂದ ಕಲಿಯ ಬೇಕಾದ ನೀತಿಗಳಾವುವು ?

3) ಜಾಗತೀಕರಣ ಎನ್ನುವುದು ಯೂರೋಪಿನವರ ಕುತಂತ್ರವೆ ?

4) ಕನ್ನಡ ಬರವಣಿಗೆಯ ಸ್ವರೂಪವನ್ನು ತಂತ್ರಜ್ಞಾನ ಹೇಗೆ ಬದಲಾಯಿಸಿತು ?

5) ಸ್ವಂತ ಉದ್ಯೋಗದ ಕಷ್ಟಸುಖಗಳ ಬಗ್ಗೆ ಲೇಖನದ ಹಿನ್ನೆಲೆಯಲ್ಲಿ ಬರೆಯಿರಿ.

6) ಸಾಲ ಮನ್ನಾ ಬಗ್ಗೆ ನಿಮ್ಮ ನಿಲುವುಗಳೇನು ? ಪಠ್ಯದ ಹಿನ್ನೆಲೆಯಲ್ಲಿ ಬರೆಯಿರಿ.

II. **ಎರಡು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (**ನೂರ ಅರವತ್ತು** ಪದಗಳಿಗೆ ಮೀರದಂತೆ). **(10×2=20)**

1) ಝೂನ್ ಕತೆಯಲ್ಲಿ ದೇವರನ್ನು ಕಾಣುವ ಹಂಬಲ ಹೇಗಿರಬೇಕೆಂದು ವಿವರಿಸಲಾಗಿದೆ ?

2) ಸ್ಥಳೀಯ ಮತ್ತು ವಿಶ್ವಾತ್ಮಕ ಎಂದು ಯಾವ ಯಾವ ಸಂಗತಿಗಳನ್ನು ಗುರುತಿಸಬಹುದು ? ಏಕೆ ? ಬರೆಯಿರಿ.

3) ಗ್ರಾಮೀಣ ಆರ್ಥಿಕತೆಯನ್ನು ಸುಧಾರಿಸುವ ಬಗ್ಗೆ ನಿಮ್ಮ ಯೋಜನೆಗಳನ್ನು ಮತ್ತು ಸಲಹೆಗಳನ್ನು ಮಂಡಿಸಿ.

III. ಕೆಳಕಂಡ ಪಠ್ಯವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ. **(3×1=3)**

ಸರ್ಕಾರವಾಗಲಿ, ಸರ್ಕಾರದ ಒಪ್ಪಿಗೆಯಿಂದ ಖಾಸಗಿ ಶಕ್ತಿಗಳಾಗಲಿ ಸ್ಥಾಪಿಸುವ ಪ್ರತಿಮೆಗಳು ಈಗ ನಿರ್ದಿಷ್ಟ ಸಮೂಹದ ತಾತ್ಕಾಲಿಕ ತಮಣೆಗಾಗಿ ಬಳಸುವ ಸಾಧನ ಸಂಕೇತಗಳಾಗುತ್ತಿವೆ. ದಲಿತರ ಹೋರಾಟಕ್ಕೆ ಓಗೊಟ್ಟು ಸಾಮಾಜಿಕ ಪಿಡುಗುಗಳನ್ನು ಸಂಪೂರ್ಣ ತೊಡೆಯಲು ಸಾಧ್ಯವಾಗದಿದ್ದರೂ ಅಂಬೇಡ್ಕರ್ ಪ್ರತಿಮೆ ಹಾಕಿ ರಾಜಕೀಯವಾಗಿ ತಮಣಿ ಮಾಡುವ ಪ್ರಯತ್ನ ಮಾಡಲಾಗುತ್ತದೆ. ಹಿಂದುಳಿದ ವರ್ಗಗಳ ಒತ್ತಾಯ ಹೇರುತ್ತಾ ಬಂದಾಗ ದೇವರಾಜ ಅರಸರ ಪ್ರತಿಮೆಯೂ ಸ್ಥಾಪನೆಗೊಂಡು ಸರ್ಕಾರ ಸಂತೋಷ

P.T.O.

ಕೊಡಬಹುದು. ಒತ್ತಾಯ ಉರಿಯೆದ್ದರೆ ಕಿತ್ತೂರು ಚೆನ್ನಮ್ಮನೂ ನಗರದ ಪ್ರತಿಮೆಯಾಗಬಹುದು. ಹೀಗೆ ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. ಆದರೆ ಸರ್ಕಾರದ ನಿಜವಾದ ಸಾಧನೆಯಿರುವುದು ದಲಿತರನ್ನು, ಹಿಂದುಳಿದ ವರ್ಗಗಳನ್ನು, ಇವರೆಲ್ಲರನ್ನೂ ಒಳಗೊಂಡ ಕನ್ನಡಿಗರನ್ನು ಸಾಮಾಜಿಕ-ಆರ್ಥಿಕ ಸಮಾನತೆಯತ್ತ ಕೊಂಡೊಯ್ಯುವ ಪ್ರಾಮಾಣಿಕ ಪ್ರಕ್ರಿಯೆಯಲ್ಲಿ ಎಂಬುದನ್ನು ಮರೆಸಿ ಪ್ರತಿಮೆಗಳ ನೆರಳಲ್ಲಿ ನಿಟ್ಟುಸಿರು ಬಿಡಲು ಅವಕಾಶ ಕಲ್ಪಿಸುವುದರಿಂದ, ಇಂಥ ಪ್ರತಿಮೆಗಳು ಸಾಧನೆಗಳಲ್ಲ; ಕೇವಲ ಸಂಕೇತಗಳು.

(ಸುಮಾರು 90 ಪದಗಳಿವೆ, 30 ಪದಗಳಿಗೆ ಇದನ್ನು ಇಳಿಸಬೇಕು).

IV. ಸಂಕ್ಷೇಪಿಸಿದ ಬರಹ ಆಧರಿಸಿ **ಎರಡು** ಪ್ರಶ್ನೆಗಳನ್ನು ರೂಪಿಸಿ. **(1×2=2)**

V. ಇವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತವಾಕ್ಯ ರಚಿಸಿ. **(1×2=2)**

1) ಒಳಗೊಳ್ಳು
2) ದಾಸ್ತೋವಸ್ಕಿ
3) ಜನಸಂಖ್ಯೆ
4) ಭರವಸೆ.

VI. ಕಾಲೇಜಿನ ಶುಲ್ಕದಲ್ಲಿ ವಿನಾಯತಿ ಕೋರಿ ಪ್ರಾಂಶುಪಾಲರಿಗೆ ಪತ್ರ ಬರೆಯಿರಿ. **(4×1=4)**

VII. ಇವುಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ. **(1×4=4)**

1) ದತ್ತಾಂಶ
2) ಝಿುನ್
3) ಹೊನ್ನು
4) ಪರಿಭ್ರಮಣ
5) ರಿಟೇಲ್ ಬ್ಯುಸಿನೆಸ್
6) ಸೂಳ್ನುಡಿ
7) ತೆರ
8) ಕೆಳೆಯ

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ. **ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ. **(1×5=5)**

1) ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘವು ಮೊದಲ ಸಮ್ಮೇಳವನ್ನು ನಡೆಸಿದ ವರ್ಷ

ಎ) 1916 ಬಿ) 1986

ಸಿ) 1911 ಡಿ) 1896

2) ಭಾಷೆ ಎಂದರೆ ರಷ್ಯನ್ ಭಾಷೆಯಲ್ಲಿ

ಎ) ಮಾತು ಬಿ) ಸಮಾಜ

ಸಿ) ಜನ ಡಿ) ನಂಬಿಕೆ

3) ರವೀಂದ್ರನಾಥ ಠ್ಯಾಗೋರ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆ

ಎ) ಅನಿಕೇತನ ಬಿ) ಶಾಂತಿನಿಕೇತನ

ಸಿ) ಚೇತನ ಡಿ) ಕಲಾನಿಕೇತನ

4) ಮನುಷ್ಯನ ಭಾವನೆಗಳನ್ನು ಬದಲಿಸಬಲ್ಲ ರಾಸಾಯನಿಕಗಳನ್ನು ಒಳಗೊಂಡ ಔಷಧಗಳ ಆವಿಷ್ಕಾರ ಆರಂಭವಾದುದ್ದು

ಎ) 1925ರ ನಂತರ ಬಿ) 1935ರ ನಂತರ

ಸಿ) 1950ರ ನಂತರ ಡಿ) 1945ರ ನಂತರ

5) ಕಾರ್ಯಕಾರಿ ಸಮಿತಿಯ ಸಭೆಯು ಎಷ್ಟು ತಿಂಗಳಿಗೊಮ್ಮೆ ನಡೆಯಬೇಕು ?

ಎ) ಪ್ರತಿ ತಿಂಗಳಿಗೊಮ್ಮೆ ಬಿ) ಮೂರು ತಿಂಗಳಿಗೊಮ್ಮೆ

ಸಿ) ಆರು ತಿಂಗಳಿಗೊಮ್ಮೆ ಡಿ) ಒಂಭತ್ತು ತಿಂಗಳಿಗೊಮ್ಮೆ